ವಿಮರ್ಶಾ ವಲಯ ಹೇಗೆ ಎಲ್ಲಿಂದ ಪಡೆದುಕೊಳ್ಳಬೇಕು? ಅಂದರೆ, ಇಂಥ ಹುಡುಕಾಟಕ್ಕೆ ನಾವು ಹಿಡಿಯಬಹುದಾದ ದಾರಿಗಳೇನು?

ನಾನು ಮಾತನಾಡುವಾಗ ಯಾವಗಲೋ ಒಮ್ಮೆ ಅಮೂರ್ತವಾಗಿ ಯೋಚನೆಗಳು ಬಂದಿರ್ತವೆ. ಅವುಗಳಿಗೆ ಒಂದು ಸಮರ್ಥವಾದ ಸ್ಟ್ರಕ್ಚರ್ ಇರೋದಿಲ್ಲ. ಎಲ್ಲಾ ಯೋಚನೆಗಳು ಅಮೂರ್ತವಾಗಿ ಇರ್ತವೆ. ಅವುಗಳನ್ನು ಬೆಳೆಸ್ತಾ ಹೋಗ್ತೀನಿ. ಸುಮಾರು ಕಾಲದಿಂದ ತುಡಿತಾ ಇರೋ ಕೆಲ ಅಂಶಗಳನ್ನು ಹಂಚಿಕೊಳ್ತೀನಿ. ಹೊಸ ತಾತ್ವಿಕತೆಯ ಅಗತ್ಯ ಈಗ ಕನ್ನಡ ವಿಮರ್ಶೆಗೆ ಇದೆಯಾ? ಅನ್ನೊ ಪ್ರಶ್ನೆ. ಕನ್ನಡ ವಿಮರ್ಶೆ ಈಗ ಮುಖ್ಯವಾಗಿ ಯಾವ ಸ್ವರೂಪವನ್ನ ಹಿಡೀತಾ ಇದೆ, ಅಂದರೆ ಕಳೆದ ಎರಡು ದಶಕಗಳಲ್ಲಿ ಯಾವ ಮುಖ್ಯ ನೆಲೆಗಳನ್ನು ಹಿಡಿದಿದೆ, ಈಗ ಹಿಡಿದಿರುವ ನೆಲೆಯನ್ನು ಬಿಟ್ಟು ಬೇರೊಂದು ನೆಲೆಯನ್ನು ನಾವು ತೆಗೆದುಕೊಳ್ಳಬೇಕಾಗಿದೆಯಾ? ಕಳೆದ ಹದಿನೈದು ಇಪ್ಪತ್ತು ವರ್ಷಗಳಲ್ಲಿ ನಾವು ಬಹುಮುಖ್ಯವಾದಂಥ ಕೆಲವು ಆಧುನಿಕ ಪೂರ್ವ ಸಾಹಿತ್ಯದ ಗ್ರಹಿಕೆ ಮಾಡುವಲ್ಲಿ ಮೀಮಾಂಸೆಯ ಕಲ್ಪನೆಯನ್ನೇ ತಪ್ಪಾಗಿ ಗ್ರಹಿಸಿದ್ದೇವೆ. ಈ ಹದಿನೈದು ಇಪ್ಪತ್ತು ವರ್ಷಗಳಲ್ಲಿ ನಮ್ಮ ವಿಮರ್ಶೆ ಮುಖ್ಯವಾಗಿ ಸಮಾಜ ಕೇಂದ್ರಿತವಾಗಿತ್ತೆ? ಈ ಸಾಮಾಜಿಕತೆಯನ್ನು ಹೆಚ್ಚು ಹುಡುಕಲಿಕ್ಕೆ ಪ್ರಯತ್ನಿಸಿದ್ದೇವೆಯೆ? ಇದು ಕಾಲದ ಅಗತ್ಯವೂ ಆಗಿತ್ತು. ಇದು ಮುಖ್ಯ ಹುಡುಕಾಟ ಕೂಡ ಹೌದು. ಇದನ್ನು ನಾನು ಅಲ್ಲಗಳೆಯುತ್ತಿಲ್ಲ. ಇದನ್ನು ಬಿಡಬೇಕು ಅಂತಲೂ ಹೇಳುತ್ತಿಲ್ಲ. ದಯವಿಟ್ಟು ತಪ್ಪಾಗಿ ಭಾವಿಸಬೇಡಿ. ಯಾಕೆಂದರೆ, ಸಾಮಾಜಿಕತೆ ಬಗ್ಗೆ ಒಂಚೂರು ಏನಾದ್ರೂ ಮಾತನಾಡಿದ್ರೆ ನೋಡಿ, ಇವನು ಸಮಾಜವಿರೋಧಿ ಅನ್ನೋ ಭಾವನೆ ಅನೇಕರಲ್ಲಿ ಬರೋ ಸಾಧ್ಯತೆ ಇದೆ. ಈ ಇಪ್ಪತ್ತು ವರ್ಷದಲ್ಲಿ ಇದನ್ನು ಸಾಕಷ್ಟು ಪ್ರಮಾಣದಲ್ಲಿ ಹುಡುಕಾಡಿದೀವಿ. ವಚನಕಾರರನ್ನು ಓದುವಾಗ ಸಾಮಾನ್ಯವಾಗಿ ಮುಖ್ಯ ವಿಷಯವೇ ಸಾಮಾಜಿಕತೆಯ ಹುಡುಕಾಟ ಆಗಿರ್ತದೆ. ಅನೇಕರು ಇದೇ ನೆಲೆಯಲ್ಲಿ ಲೇಖನ ಬರೀತಾರೆ. ಆಧುನಿಕ ಕಾವ್ಯದ ಕುರಿತು ಮಾತನಾಡುವಾಗ ಮುಖ್ಯ ಸಂಗತಿ ಇದೇ ಆಗಿರ್ತದೆ. ಸಾಮಾಜಿಕ ಆಯಾಮಗಳ ಪ್ರಶ್ನೆ ಅನೇಕ ಬಾರಿ ಕೇಳಿಕೊಂಡಿದ್ದೇವೆ. ಈಗ ನನಗಿರೋ ಪ್ರಶ್ನೆ ಏನಂದರೆ, ಈ ಸಾಮಾಜಿಕತೆಯ ಆಯಾಮವನ್ನು ಒಳಗೊಂಡೂ ಇನ್ನೊಂದು ಹೆಜ್ಜೆ ಮುಂದಿಡೋಕೆ ಸಾಧ್ಯವೆ? ಅನ್ನೋದು. ಕನ್ನಡ ವಿಮರ್ಶೆ ಹೊಸ ತಾತ್ವಿಕತೆಗಳನ್ನು ಹುಡುಕೋದು ಹೇಗೆ? ಅದನ್ನು ಮೈಗೂಡಿಸಿಕೊಂಡು ಮುನ್ನಡೆಯೋದು ಹೇಗೆ? ಇವೆಲ್ಲ ನನ್ನನ್ನು ಕಾಡುತ್ತಿರುವ ಪ್ರಶ್ನೆಗಳು. ಇದರರ್ಥ ನನಗೆಲ್ಲ ಗೊತ್ತಾಗಿದೆ, ನಿಮಗೆ ದಾರಿ ತೋರಿಸ್ತೇನೆ ಅಂತಲ್ಲ. ಆದರೆ, ಇಂಥದ್ದೊಂದು ಪ್ರಶ್ನೆ ಕೇಳಿಕೊಳ್ಳುವ ತುರ್ತು ಕನ್ನಡದ ಇಂದಿನ ವಿಮರ್ಶೆಗೆ ಇದೆ ಅಂತ ನನಗೆ ತೀವ್ರವಾಗಿ ಅನ್ನಿಸ್ತಿದೆ.

ಹೊಸ ತಾತ್ವಿಕತೆಗಳು ಬೇಕು ಅಂತ ಅನ್ನಿಸ್ಲಿಕ್ಕೆ ಮುಖ್ಯವಾದ ಕಾರಣಗಳು ಇವು. ಒಂದು, ಆಧುನಿಕ ಪೂರ್ವ ಕಾವ್ಯದ ಓದಿನಲ್ಲಿ ತೋರುತ್ತಿರುವ ತಪ್ಪು ದಾರಿಗಳು ಮತ್ತು ಸಾಮಾಜಿಕ ಆಯಾಮ ದಾಟಿ ಮುನ್ನಡೆಯಬೇಕಾದ ತುರ್ತು. ಸಾಮಾಜಿಕತೆಯನ್ನು ನಾವು ಆವಾಹಿಸಿಕೊಂಡ ಬಗೆ ಹೇಗಿದೆಯೆಂದರೆ ಕೆಲವರನ್ನು ಬಿಟ್ಟು ಅನೇಕ ವಿಮರ್ಶಕರು ಹೊಸಬರು ಹಳಬರು ಇದನ್ನೇ ಹುಡುಕುವ ಸೆಳೆತಕ್ಕೆ ಸಿಲುಕಿಕೊಂಡರು. ಈ ವಿಮರ್ಶಕರನ್ನು ಬಿಡಿ. ಕವಿತೆ, ಕಥೆ ಬರೆಯುವವರು ಕೂಡ ಈ ಸೆಳೆತಕ್ಕೆ ಒಳಗಾದರು. ಇಂಥ ಕವನಗಳನ್ನು ಬರೆಯದಿದ್ದರೆ ನಾವು ನಿರುಪಯುಕ್ತರಾಗ್ತೀವಿ, ನಮ್ಮನ್ನು ಯಾರೂ ಗುರುತಿಸುವುದಿಲ್ಲ ಅನ್ನೋ ಭಯದ ಛಾಪು ಎಲ್ಲೆಡೆ ಹರಡಿಕೊಂಡಿದೆ. ಸಾಮಾಜಿಕತೆ ಅನ್ನೋದು ನಮ್ಮಲ್ಲಿ ಕ್ರಿಯೇಟಿವಿಟಿಯ ಛಾಪು ಆಗಬೇಕಿತ್ತು. ಆದರೆ, ಅದು ಭಯದ ಛಾಪು ಆಗಿಬಿಟ್ಟಿದೆ. ಹೀಗಾಗಿ, ದಂಡಿದಂಡಿಯಾಗಿ ದುರ್ಬಲ ಕವಿತೆಗಳು ರಚನೆಯಾದವು. ಸೃಜನಶೀಲತೆಯಲ್ಲಿ ಇಂಥ ಎಲ್ಲಾ ತರಹದ ಭಯಗಳನ್ನು ಬಿಟ್ಟು ಮೈಕೊಡವಿಕೊಂಡು ನಿಂತಾಗ ಮಾತ್ರ ಹೊಸ ರೀತಿಯ ಬರವಣಿಗೆ ಸಾಧ್ಯವಾಗುತ್ತದೆ.